ದಿ: **14-10-2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ **ಸವಾಲು :** **ವಾದಿ ಪರ ವಕೀಲರಾದ ಶ್ರೀ ಎಂ.ಜೆ.ಎಸ್ ರವರಿಂದ**

ನಾನು ರಟ್ಟಾಡಿ ಗ್ರಾಮದ ಮಂಡಾಡಿ-ಮೇಲಾಡಿ ಮನೆಯಲ್ಲಿ ಹುಟ್ಟಿ ಬೆಳೆದಿದ್ದೇನೆ ಎಂದರೆ ಸರಿ. ಸದರಿ ಮನೆಯು 22ನೇ ದಾವಾ ಆಸ್ತಿಯಲ್ಲಿದೆ ಎಂದರೆ ಸರಿ. ಮೊದಲು ಆ ಮನೆಯು ಹುಲ್ಲು ಚಾವಣಿಯ ಮನೆ ಎಂದರೆ ಸರಿ. ನಾನು ಹುಟ್ಟಿದ ಸಂದರ್ಭದಲ್ಲಿ ಸದರಿ ಮನೆಗೆ 120 ವರ್ಷ ವಯಸ್ಸಾಗಿತ್ತು ಎಂದರೆ ಸುಳ್ಳು. ನಾನು ಹುಟ್ಟುವಾಗ ಸದರಿ ಮನೆಗೆ 20 ವರ್ಷ ಪ್ರಾಯವಾಗಿತ್ತು. ಸದರಿ ಹುಲ್ಲು ಚಾವಣಿ ಮನೆ ಇದ್ದ ಜಾಗದಲ್ಲಿ ಈಗ ಹಂಚಿನ ಮನೆ ಇದೆ ಎಂದರೆ ಸರಿ. ನನ್ನ ತಾಯಿ ಮಂಜಿ ಪೂಜಾರ್ತಿ, ಅವರ ತಾಯಿ ಮುತ್ತು ಪೂಜಾರ್ತಿ ಸದರಿ ಮನೆಯ ಕುಟುಂಬದ ಸದಸ್ಯರು ಎಂದರೆ ಸರಿ.

**2)** ಮಂಜಿ ಪೂಜಾರ್ತಿ, ಮುತ್ತು ಪೂಜಾರ್ತಿ, ಪುಟ್ಟ ಪೂಜಾರಿ, ದಾರು ಪೂಜಾರ್ತಿ ಎಲ್ಲರೂ ಸಹ ಸದರಿ ಮೇಲಾಡಿ ಮನೆಯಲ್ಲಿ ಹುಟ್ಟಿ ಬೆಳದಿದ್ದಾರೆ ಎಂದರೆ ಸುಳ್ಳು. ಅವರು ಯಾವ ಊರುಗಳಲ್ಲಿ ಹುಟ್ಟಿ ಬೆಳೆದಿದ್ದಾರೆ ಎನ್ನುವುದು ಗೊತ್ತಿಲ್ಲ.

**3)** ದಿನಾಂಕ 01-03-1974ರಂದು ಮತ್ತು ಅದರ ನಿಕಟ ಪೂರ್ವದಂದು 1 ರಿಂದ 24ನೇ ದಾವಾ ಆಸ್ತಿಗಳು ಗೇಣಿ ಹಕ್ಕಿನ ಆಸ್ತಿಗಳಾಗಿದ್ದವು ಎಂದರೆ ಸರಿ. 1 ರಿಂದ 24ನೇ ದಾವಾ ಆಸ್ತಿಗಳು ಮೂಲತಃ ಅಲ್ಬಾಡಿ ಗ್ರಾಮ ತೊನ್ನಾಸೆಯ ರುಕ್ಮಿಣಿ ಶೆಡ್ತಿಯ ಅಳಿಯ ಸಂತಾನ ಕುಟುಂಬದ ಮೂಲಿಹಕ್ಕಿನ ಆಸ್ತಿಗಳಾಗಿದ್ದವು ಎಂದರೆ ಸರಿ. ಸದರಿ ರುಕ್ಮಿಣಿ ಶೆಡ್ತಿಯ ಮನೆಯು 1 ರಿಂದ 24ನೇ ದಾವಾ ಆಸ್ತಿಗಳ ಸುಮಾರು 10-12 ಕಿ.ಮೀ ದೂರದಲ್ಲಿ ಇರುತ್ತವೆ. ರುಕ್ಮಿಣಿ ಶೆಡ್ತಿ ದೊಡ್ಡ ಭೂಮಾಲೀಕ ಕುಟುಂಬದವರು ಎಂದರೆ ನನಗೆ ಮಾಹಿತಿ ಇಲ್ಲ. ತಮ್ಮ ಮನೆಯಿಂದ 1 ರಿಂದ 24ನೇ ದಾವಾ ಆಸ್ತಿಗಳು ದೂರದಲ್ಲಿದ್ದುದ್ದರಿಂದ ಅವುಗಳನ್ನು ರುಕ್ಮಿಣಿ ಶೆಡ್ತಿಯ ಹಿರಿಯರು ಚಾಲಾಗೇಣಿ ನೀಡಿದ್ದರು ಎಂದರೆ ಸುಳ್ಳು. 1 ರಿಂದ 24ನೇ ದಾವಾ ಆಸ್ತಿಗಳಿಗೆ ಸಂಬಂಧಿಸಿದ ಯಾವುದೇ ಚಾಲಾಗೇಣಿ ದಾಖಲೆಗಳನ್ನು ನಾನು ನೋಡಿಲ್ಲ.

**4)** ದಾರು ಪೂಜಾರ್ತಿ ಮತ್ತು ಅವರ ಹಿರಿಯರು ವೃತ್ತಿಯಲ್ಲಿ ಕೃಷಿಕರು ಎಂದರೆ ಸರಿಯಲ್ಲ, ಅವರು ಕೃಷಿ ಕೂಲಿಗಳು. ಅಮಾವಾಸೆಬೈಲು ವಠಾರದಲ್ಲಿ ಅವರು ಕೂಲಿ ಮಾಡುತ್ತಿದ್ದರು ಎಂದು ನನ್ನ ತಾಯಿ ಹೇಳುತ್ತಿದ್ದರು. ದಾರು ಪೂಜಾರ್ತಿ ಮತ್ತು ಅವರ ಹಿರಿಯರು ಕೃಷಿ ಕೂಲಿ ಕೆಲಸ ಮಾಡುತ್ತಿದ್ದ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ. ದಾರು ಪೂಜಾರ್ತಿ ಮತ್ತು ಅವರ ಹಿರಿಯರು ರುಕ್ಮಿಣಿ ಶೆಡ್ತಿಯ ಹಿರಿಯರಿಂದ 1 ರಿಂದ 24ನೇ ದಾವಾ ಆಸ್ತಿಗಳನ್ನು ಚಾಲಾಗೇಣಿ ಪಡೆದಿದ್ದರು ಎಂದರೆ ಸರಿಯಲ್ಲ. ಸುಮಾರು 300 ವರ್ಷಗಳಿಂದ 1 ರಿಂದ 24ನೇ ದಾವಾ ಆಸ್ತಿಗಳು ದಾರು ಪೂಜಾರ್ತಿ ಮತ್ತು ನಮ್ಮ ಅಳಿಯ ಸಂತಾನ ಕುಟುಂಬದ ಆಸ್ತಿಗಳು ಎಂದರೆ ಸರಿಯಲ್ಲ.

**5)** ನಂದಿ ಪೂಜಾರಿ ಮತ್ತು ದಾರು ಪೂಜಾರ್ತಿಯ ನಡುವೆ ಯಾವ ರೀತಿಯ ಸಂಬಂಧ ಇದೆ ಎಂದು ನನಗೆ ಗೊತ್ತಿಲ್ಲ. ಪುಟ್ಟ ಪೂಜಾರಿಯು ದಾರು ಪೂಜಾರ್ತಿಯ ಖಾಸಾ ತಮ್ಮ ಎಂದರೆ ಸರಿ. ನಂದಿ ಪೂಜಾರಿಯ ಪುಟ್ಟ ಪೂಜಾರಿಯ ಸೋದರ ಮಾವ ಎಂದರೆ ಸುಳ್ಳು. ನಂದಿ ಪೂಜಾರಿಯು ಎಷ್ಟು ವರ್ಷಗಳ ಮೇಲಾಡಿ ಕುಟುಂಬದ ಯಜಮಾನರಾಗಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ನಂದಿ ಪೂಜಾರಿಯು 1944ನೇ ಸಾಲಿನಲ್ಲಿ ಮರಣ ಹೊಂದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಂದಿ ಪೂಜಾರಿ ಮರಣ ಹೊಂದಿದ ನಂತರ ಅವರ ಸೋದರ ಅಳಿಯ ಪುಟ್ಟ ಪೂಜಾರಿಯು ಮೇಲಾಡಿ ಕುಟುಂಬದ ಯಜಮಾನನಾಗಿದ್ದ ಎಂದರೆ ಸುಳ್ಳು. ನಂದಿ ಪೂಜಾರಿ ಮೃತರಾದ ನಂತರ ಪುಟ್ಟ ಪೂಜಾರಿಯು ಮೇಲಾಡಿ ಕುಟುಂಬದ ಹಿರಿಯ ಸದಸ್ಯನಾಗಿದ್ದ ಎಂದರೆ ನನಗೆ ಗೊತ್ತಿಲ್ಲ. ಪುಟ್ಟ ಪೂಜಾರಿಯು 1944ನೇ ಸಾಲಿನಿಂದ ಅವರು ಮರಣ ಹೊಂದುವವರೆಗೆ ಅಂದರೆ 1987ರವರೆಗೆ ಮೇಲಾಡಿ ಕುಟುಂಬದ ಯಜಮಾನನಾಗಿದ್ದ ಎಂದರೆ ಸುಳ್ಳು.

**6)** 12 ರಿಂದ 24ನೇ ದಾವಾ ಆಸ್ತಿಗಳ ಮೂಲಿಹಕ್ಕನ್ನು ಅದರ ಮಾಲೀಕರಾದ ರುಕ್ಮಿಣಿ ಶೆಡ್ತಿಯು ಕುಟುಂಬದ ಪರವಾಗಿ ಮಾರಾಟ ಮಾಡಲು ಮುಂದೆ ಬಂದಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ರುಕ್ಮಿಣಿ ಶೆಡ್ತಿಯು ಪುಟ್ಟ ಪೂಜಾರಿಗೆ 12 ರಿಂದ 24ನೇ ದಾವಾ ಆಸ್ತಿಗಳ ಮೂಲಿಹಕ್ಕನ್ನು

ಮಾರಾಟ ಮಾಡುವುದಾಗಿ ನೋಟೀಸ್ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಪುಟ್ಟ ಪೂಜಾರಿಯು ಮೇಲಾಡಿ ಕುಟುಂಬದ ಯಜಮಾನನಾಗಿ 12 ರಿಂದ 24ನೇ ದಾವಾ ಆಸ್ತಿಗಳನ್ನು ಖರೀದಿ ಮಾಡಲು ದಿನಾಂಕ 26-03-1973ರಂದು ನೊಂದಾಯಿಸದ ಕರಾರು ಪತ್ರ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕರಾರಿಗೆ ಸಂಬಂಧಿಸಿದಂತೆ ಪುಟ್ಟ ಪೂಜಾರಿಯು ಒಟ್ಟು ಮೊತ್ತದ ಪೈಕಿ ರೂ.8,000/- ಹಣವನ್ನು ಪಾವತಿ ಮಾಡಿದ್ದಾರೆ ಎಂದರೆ ಸರಿಯಲ್ಲ. ದಿನಾಂಕ 26-03-1973ರಂದು ನೊಂದಾಯಿಸದ ಕರಾರು ಪತ್ರದ ಮೂಲ ಪ್ರತಿ ನನ್ನ ಬಳಿ ಇದೆ ಎಂದರೆ ಸುಳ್ಳು. ಅದನ್ನು ಹಾಜರು ಮಾಡಿದರೆ ನಿಜಸ್ಥಿತಿ ಹೊರಬರುತ್ತದೆ ಎಂದರೆ ಸರಿಯಲ್ಲ. ದಿನಾಂಕ 26-03-1973ರ ಕರಾರು ಪತ್ರ ಮತ್ತು ನಿ.ಡಿ-2ನ್ನು ಒಟ್ಟಿಗೆ ಇಡಲಾಗಿತ್ತು ಎಂದರೆ ಸರಿಯಲ್ಲ. ರೂ.8,000/- ಮುಂಗಡ ಹಣವನ್ನು ಒಟ್ಟು ಕುಟುಂಬದ ಆದಾಯದಿಂದ ನೀಡಲಾಗಿತ್ತು ಎಂದರೆ ಸುಳ್ಳು. ಕರಾರಿನ ಬಾಕಿ ಹಣವನ್ನು ಕುಟುಂಬದ ಆದಾಯದಿಂದ ಪಾವತಿ ಮಾಡಲು ತೊಂದರೆ ಇತ್ತು ಎಂದರೆ ಸುಳ್ಳು.

**7)** ದಿನಾಂಕ 17-04-1975ರಂದು ಪುಟ್ಟ ಪೂಜಾರಿಯು ತನ್ನ ಸ್ವಂತ ಹಾಗೂ ಒಟ್ಟು ಕುಟುಂಬದ ಯಜಮಾನನಾಗಿ 12 ರಿಂದ 24ನೇ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ನಿ.ಡಿ-2ರ ಕ್ರಯ ಪತ್ರ ಬರೆಸಿಕೊಂಡಿದ್ದಾನೆ ಎಂದರೆ ಸುಳ್ಳು. ನಿ.ಡಿ-2 ನನ್ನ ತಾಯಿ ಬಳಿ ಇತ್ತು ಮತ್ತು ಅದನ್ನು ಅವರು ನನಗೆ ಸುಮಾರು 1990ನೇ ಸಾಲಿನಲ್ಲಿ ನೀಡಿರುತ್ತಾರೆ. ನಿ.ಡಿ-2 ಕ್ರಯಪತ್ರದ ಪ್ರಕಾರ ಪುಟ್ಟು ಪೂಜಾರಿಯ ಅಳಿಯ ಸಂತಾನ ಕುಟುಂಬದವರು 12 ರಿಂದ 24ನೇ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಮೂಲಿಹಕ್ಕನ್ನು ಗಳಿಸಿಕೊಂಡಿದ್ದಾರೆ ಎಂದರೆ ಸುಳ್ಳು. ನಿ.ಡಿ-2 ನೊಂದಾದ ದಿನದಿಂದ ಜಾರಿಗೆ ಬಂದಿರುತ್ತದೆ.

**8)** ಪುಟ್ಟ ಪೂಜಾರಿಯು ಮರಣ ಹೊಂದುವವರೆಗೆ ಮೇಲಾಡಿ ಮನೆಯಲ್ಲಿ ವಾಸವಾಗಿದ್ದರು ಎಂದರೆ ಸರಿ. ಅವರ ಜೊತೆ ನನ್ನ ತಾಯಿಯಾದ ಮಂಜಿ ಪೂಜಾರ್ತಿ, 1 ರಿಂದ 6ನೇ ಪ್ರತಿವಾದಿಗಳು ಹಾಗೂ 1 ಮತ್ತು 2ನೇ ವಾದಿಗಳು ವಾಸವಾಗಿದ್ದೆವು ಎಂದರೆ ಸರಿ. 12 ರಿಂದ 24ನೇ

ದಾವಾ ಆಸ್ತಿಗಳು ಚಾಲಾಗೇಣಿ ಆಸ್ತಿಗಳಾಗಿದ್ದರಿಂದ ಅವುಗಳ ಮಾಲೀಕರು ಕಡಿಮೆ ಬೆಲೆಗೆ ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು.

**9)** ದಿನಾಂಕ 01-03-1974ರಂದು ಮತ್ತು ಅದರ ನಿಕಟಪೂರ್ವದಂದು 1 ರಿಂದ 11ನೇ ದಾವಾ ಆಸ್ತಿಗಳು ಪುಟ್ಟ ಪೂಜಾರಿ ಮತ್ತು ಅವರ ಅಳಿಯ ಸಂತಾನ ಕುಟುಂಬದ ಆಸ್ತಿಗಳಾಗಿದ್ದವು ಎಂದರೆ ಸುಳ್ಳು. ಪುಟ್ಟ ಪೂಜಾರಿಯು 1 ರಿಂದ 11ನೇ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಅವುಗಳ ಗೇಣಿ ಹಕ್ಕಿಗೆ ಒಟ್ಟು ಕುಟುಂಬದ ಪರವಾಗಿ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಪುಟ್ಟ ಪೂಜಾರಿ ಎಷ್ಟನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಪುಟ್ಟ ಪೂಜಾರಿ ದಾಖಲೆಗಳಿಗೆ ಸಹಿ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಪುಟ್ಟ ಪೂಜಾರಿಗೆ ಖುದ್ದಾಗಿ ಓದಲು ಮತ್ತು ಬರೆಯಲು ಬರುತ್ತಿತ್ತು ಎಂದರೆ ಸುಳ್ಳು. ಭೂನ್ಯಾಯ ಮಂಡಳಿ ವಿಚಾರಣೆ ಮಾಡಿ 1 ರಿಂದ 11ನೇ ದಾವಾ ಆಸ್ತಿಗಳ ಅಧಿಭೋಗದಾರಿಕೆಯ ಹಕ್ಕನ್ನು ಪುಟ್ಟ ಪೂಜಾರಿಯ ಒಟ್ಟು ಕುಟುಂಬದ ಪರವಾಗಿ ಮಂಜೂರು ಮಾಡಿದೆ ಎಂದರೆ ಸುಳ್ಳು. ವಿಚಾರಣೆಯ ಹಂತದಲ್ಲಿ ಪುಟ್ಟ ಪೂಜಾರಿಯು ಭೂನ್ಯಾಯ ಮಂಡಳಿಯ ಮುಂದೆ ಹಾಜರಾಗಿ 1 ರಿಂದ 11ನೇ ದಾವಾ ಆಸ್ತಿಗಳನ್ನು ಒಟ್ಟು ಕುಟುಂಬದ ಪರವಾಗಿ ಮಂಜೂರು ಮಾಡುವಂತೆ ಹೇಳಿಕೆ ನೀಡಿದ್ದಾರೆ ಎಂದರೆ ಸುಳ್ಳು.

**10)** ನಾನು ಕೆದೂರಿನ ಸರ್ಕಾರಿ ಪ್ರೌಢ ಶಾಲೆಯಲ್ಲಿ ಹತ್ತನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. 1983-84ನೇ ಸಾಲಿನಲ್ಲಿ 10ನೇ ತರಗತಿಯಲ್ಲಿ ತೇರ್ಗಡೆಯಾಗಿರುತ್ತೇನೆ. ಪುಟ್ಟ ಪೂಜಾರಿ 1987ನೇ ಸಾಲಿನಲ್ಲಿ ಮರಣ ಹೊಂದಿದ ನಂತರ ನನ್ನ ತಾಯಿಯಾದ ಮಂಜಿ ಪೂಜಾರ್ತಿ ಯಜಮಾನಿಯಾಗಿದ್ದರು. ಪುಟ್ಟ ಪೂಜಾರಿ ಮರಣ ಹೊಂದಿದ ನಂತರ ನಾವು ದಿನಾಂಕ 22-02-2014ರಂದು ನಿ.ಡಿ-4ರ ಪ್ರಕಾರ ಒಂದು ಪಾಲು ಪಟ್ಟಿ ಮಾಡಿಕೊಂಡಿರುತ್ತೇವೆ. ಸದರಿ ವಿಭಾಗ ಪತ್ರಕ್ಕೆ ವಾದಿಗಳು ಪಕ್ಷಗಾರರಲ್ಲ ಎಂದರೆ ಸರಿ. ನಿ.ಡಿ- 4 ಆಗುವ ಸಂದರ್ಭದಲ್ಲಿ ನಮ್ಮ ಕುಟುಂಬದಲ್ಲಿ ನಾನೇ ಹೆಚ್ಚಿನ ವಿದ್ಯಾಭ್ಯಾಸ ಮಾಡಿದ್ದ ವ್ಯಕ್ತಿ ಎಂದರೆ ಸರಿ. ಒಟ್ಟು ಕುಟುಂಬದ ಇತರೇ ಸದಸ್ಯರಿಗೆ ಮತ್ತು

ವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ನಿ.ಡಿ -4ನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಿ.ಡಿ -4 ಜಾರಿಗೆ ಬಂದಿಲ್ಲ ಮತ್ತು ಅದರ ಪಕ್ಷಗಾರರಿಗೆ ಯಾವುದೇ ಹಕ್ಕುಗಳು ಪ್ರಾಪ್ತಿಯಾಗಿಲ್ಲ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀ ಸವಾಲು** : ವಾದಿಯ ಪರ ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿ ಪಾಟೀ ಸವಾಲನ್ನು ಮುಂದುಡಲಾಯಿತು.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು**)**

**ಓ ಹೇ ಕೇ ಸ ಇ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಕುಂದಾಪುರ**